# ಮೆಸ್ಸಿಯ ಮೇಲೆ ಕಣ್ಣು

ಎಲ್ಲರ ಕಣ್ಣು ಲಯೊನೆಲ್ ಮೆಸ್ಸಿಯ ಮೇಲಿದೆ. 'ವಿಶ್ವಕಪ್ ಫುಟ್‌ಬಾಲ್ ಮುಗಿದು ಅರ್ಜೆಂಟೀನಾ ಕನಸು ಭಗ್ನಗೊಂಡದ್ದೂ ಆಯಿತಲ್ಲ, ಇನ್ನೇಕೆ ಮೆಸ್ಸಿಯ ಮೇಲೆ ಕಣ್ಣು?' ಎನ್ನದಿರಿ. ಈಗ ಫುಟ್‌ಬಾಲ್ ಜಗತ್ತಿನ ಮುಂದೆ ಇರುವ ಮಿಲಿಯನ್ ಡಾಲರ್ ಪ್ರಶ್ನೆ ಇಷ್ಟೇ– ಮೆಸ್ಸಿ ಅಂತರರಾಷ್ಟ್ರೀಯ ಫುಟ್‌ಬಾಲ್ ಆಟದಿಂದ ನಿವೃತ್ತಿ ಘೋಷಿಸುತ್ತಾರಾ.. ಇಲ್ಲವಾ?

ವಿಶ್ವಕಪ್ ಫುಟ್‌ಬಾಲ್‌ನಲ್ಲಿ ಈ ಸಲ ಫೈನಲ್‌ವರೆಗೆ ಬರುವ ತಂಡ ಎಂದು ಕೋಟೆಗಟ್ಟಳೆ ಅಭಿಮಾನಿಗಳು ನಂಬಿದ್ದ ಅರ್ಜೆಂಟೀನಾ ತಂಡ, 16ರ ಹಂತದಲ್ಲಿ ಟೂರ್ನಿಯಿಂದ ಹೊರಬಿದ್ದಾಗ ಸಾಕಷ್ಟು ಜನ ಭಗ್ನಹೃದಯಿಗಳಾಗಿದ್ದು ಸುಳ್ಳಲ್ಲ. ಅದರಲ್ಲೂ ಅರ್ಜೆಂಟೀನಾ ಗಟ್ಟಿಯಾಗಿ ನಂಬಿಕೊಂಡಿದ್ದ ಮೆಸ್ಸಿ, ಫ್ರಾನ್ಸ್ ವಿರುದ್ಧದ ಆ ಪಂದ್ಯದಲ್ಲಿ 3–4ರ ಸೋಲನುಭವಿಸಿದಾಗ ಏನೂ ಮಾಡಲಾಗಲಿಲ್ಲವಲ್ಲ.. ಎನ್ನುವ ನೋವು ಹಲವರನ್ನು ಕಾಡಿತ್ತು. ಹಾಗೆ ನೋಡಿದರೆ ಈ ಸಲ ವಿಶ್ವಕಪ್ ಪಂದ್ಯಗಳಲ್ಲಿ ಮೆಸ್ಸಿ ತನ್ನ ಖ್ಯಾತಿಗೆ ತಕ್ಕಂತೆ ಸಾಧನೆ ಮಾಡಲೇ ಇಲ್ಲ. ಆಡಿದ ನಾಲ್ಕು ಪಂದ್ಯಗಳಲ್ಲಿ ಅವರು ಗಳಿಸಿದ್ದು ಒಂದೇ ಗೋಲು. ಅದರಲ್ಲೂ ಐಸ್‌ಲ್ಯಾಂಡ್ ವಿರುದ್ಧದ ಪಂದ್ಯದಲ್ಲಿ ಮಹತ್ವದ ಪೆನಾಲ್ಟಿ ಹೊಡೆತ ಗುರಿ ತಪ್ಪಿದ್ದು ಮೆಸ್ಸಿಯ ದೌರ್ಭಾಗ್ಯವೇ ಸರಿ.

ಈಗ ಎದ್ದಿರುವ ಪ್ರಶ್ನೆಗಳು ಮಹತ್ವದ್ದೇ. 31ರ ಹರೆಯದ ಮೆಸ್ಸಿಯ ಆಟ ಹಿಂದಿನ ಮಾಂತ್ರಿಕ ಸ್ಪರ್ಶವನ್ನು ಕಳೆದುಕೊಂಡಿದೆಯೆ? ಇದು ನಿವೃತ್ತಿ ಹೊಂದಲು ಸರಿಯಾದ ಸಮಯವಲ್ಲವೆ? ಬಿಸಿರಕ್ತದ ಹೊಸ ತರುಣರಿಗೆ ಅವಕಾಶ ಕೊಟ್ಟರೆ ಮೆಸ್ಸಿಯ ಬಗ್ಗೆ ಗೌರವ ಉಳಿಯುವುದಿಲ್ಲವೆ?– ಹೀಗೆಲ್ಲ ಅಭಿಮಾನಿಗಳೇ ಪ್ರಶ್ನೆ ಕೇಳಲು ತೊಡಗಿದ್ದಾರೆ.



ಮಾಧ್ಯಮಗಳಲ್ಲೂ ಚರ್ಚೆ ಜೋರಾಗಿದೆ. ಕೆಲವರು 'ಮೆಸ್ಸಿ ಈಗ ನಿವೃತ್ತಿ ಹೊಂದುವುದಿಲ್ಲ' ಎಂದರೆ, ಇನ್ನು ಕೆಲವರು, 'ಖಂಡಿತಾ ಮೆಸ್ಸಿ ನಿವೃತ್ತಿಯ ನಿರ್ಧಾರ ಕೈಗೊಳ್ಳುತ್ತಾರೆ' ಎಂದು ಭವಿಷ್ಯ ನುಡಿಯುತ್ತಿದ್ದಾರೆ.

ವಿಶ್ವಕಪ್ ಪರಾಭವದ ನಂತರ ಮೆಸ್ಸಿ ಮಾಧ್ಯಮಗಳ ಜತೆಗೆ ಮಾತನಾಡಿಲ್ಲ. ಸಾಮಾಜಿಕ ಮಾಧ್ಯಮಗಳಲ್ಲೂ ಆತ ಚಕಾರ ಎತ್ತಿಲ್ಲ. ಮೆಸ್ಸಿಯ ಈ ಮೌನವೇ ಆತ ನಿವೃತ್ತಿ ಘೋಷಿಸುವ ಚಿಂತನೆಯಲ್ಲಿದ್ದಾನೆ ಎನ್ನುವುದರ ಸೂಚನೆ ಎನ್ನಲಾಗುತ್ತಿದೆ. 2016ರಲ್ಲೂ ಹೀಗೆಯೇ ಕೋಪಾ ಅಮೆರಿಕ ಕಪ್‌ನಲ್ಲಿ ಚಿಲಿ ವಿರುದ್ಧ ಅರ್ಜೆಂಟೀನಾ ಸೋತಾಗ ಕೆಲವು ದಿನ ಮೌನವಾಗಿದ್ದ ಮೆಸ್ಸಿ, ಅಂತರರಾಷ್ಟ್ರೀಯ ಪಂದ್ಯಗಳಿಂದ ನಿವೃತ್ತಿ ಘೋಷಿಸಿದ್ದ. ಆದರೆ ಎರಡೇ ವಾರಗಳಲ್ಲಿ ಅಭಿಮಾನಿಗಳ ಒತ್ತಡದ ಮೇರೆಗೆ ನಿವೃತ್ತಿಯ ನಿರ್ಧಾರ ಹಿಂದಕ್ಕೆ ತೆಗೆದುಕೊಂಡಿದ್ದ. ಆಗ ಕಣ್ಣೆದುರಿಗೆ ವಿಶ್ವಕಪ್ ಪಂದ್ಯಗಳಿದ್ದವು. ಆ ಪಂದ್ಯಗಳಲ್ಲಿ ತಂಡ ಗೆಲ್ಲಬೇಕೆಂದರೆ ಮೆಸ್ಸಿ ಬೇಕೇ ಬೇಕು ಎನ್ನುವ ನಿರೀಕ್ಷೆ ಇತ್ತು. ಆದರೆ ಈಗ ವಿಶ್ವಕಪ್‌ನ ದಯನೀಯ ಸೋಲು ಇಡೀ ದೇಶವನ್ನೇ ಕಂಗೆಡಿಸಿದೆ. ಅರ್ಧಕ್ಕರ್ಧ ಅಭಿಮಾನಿಗಳು ಮೆಸ್ಸಿ ಮೇಲೆ ಕೋಪ– ತಾಪಗಳನ್ನೂ ಪ್ರದರ್ಶಿಸಿದ್ದಾರೆ.

ಮೆಸ್ಸಿ ತನ್ನ ನಿವೃತ್ತಿಯ ನಿರ್ಧಾರಕ್ಕೆ ಮುನ್ನ ಹೆಂಡತಿಯ ಜತೆಗೆ ಚರ್ಚಿಸಲು ನಿರ್ಧರಿಸಿದ್ದಾನಂತೆ. ಅದಕ್ಕೂ ಮುನ್ನ ಕುಟುಂಬದ ಸದಸ್ಯರ ಜತೆಗೆ ಸ್ವಲ್ಪ ಕಾಲ ಆರಾಮವಾಗಿ ರಜೆ ಕಳೆಯಲು ಬಯಸಿದ್ದಾನಂತೆ. 'ವಿಶ್ವಕಪ್‌ನ ಹೊಡೆತ ಅರಗಿಸಿಕೊಳ್ಳಲು ಮೆಸ್ಸಿ ಕಷ್ಟಪಡುತ್ತಿದ್ದಾನೆ. ಆದರೆ ಅರ್ಜೆಂಟೀನಾ ತಂಡಕ್ಕೆ ಆತನ ಅಗತ್ಯ ಈಗಲೂ ಇದೆ' ಎನ್ನುವುದು ತಂಡದ ಮ್ಯಾನೇಜ್‌ಮೆಂಟ್ ನಿಲುವು. ಅಂದ ಹಾಗೆ ರಷ್ಯಾದಲ್ಲಿ ವಿಶ್ವಕಪ್ ಪಂದ್ಯಗಳು ನಡೆಯುತ್ತಿದ್ದಾಗ ಮೆಸ್ಸಿಯ ಪತ್ನಿ ರೊಕ್ಕುಜೊ ಗೈರುಹಾಜರಾಗಿದ್ದುದರ ಬಗ್ಗೆಯೂ ಸಾಕಷ್ಟು ಚರ್ಚೆ ನಡೆದಿತ್ತು. ಆಕೆ ತೀರಾ ವೈಯಕ್ತಿಕ ಕಾರಣಗಳಿಂದ ಪಂದ್ಯಗಳಿಗೆ ಹಾಜರಾಗಲಿಲ್ಲ ಎಂದು ಬಳಿಕ ಸ್ಪಷ್ಟೀಕರಣವೂ ಬಂದಿತ್ತು.

ಮೆಸ್ಸಿಯ ನಿವೃತ್ತಿ ಆಗಬಹುದು ಎಂದು ಊಹಿಸುವವರು ಹಲವು ಕಾರಣಗಳನ್ನು ಮುಂದೊಡ್ಡುತ್ತಿದ್ದಾರೆ. ಅದರಲ್ಲಿ ಮುಖ್ಯವಾದದ್ದು ತನಗೆ ಖ್ಯಾತಿ, ಹಣ ಎಲ್ಲವನ್ನೂ ನೀಡಿದ ಬಾರ್ಸೆಲೊನಾ ಕ್ಲಬ್ ಪರವಾಗಿ ಇನ್ನೂ ಒಂದೆರಡು ವರ್ಷ ಆಡಬೇಕೆಂಬ ಆತನ ಹಂಬಲ. ರಾಷ್ಟ್ರೀಯ ತಂಡದಿಂದ ನಿವೃತ್ತಿ ಹೊಂದಿದರೆ, ಕ್ಲಬ್ ತಂಡದ ಪರವಾಗಿ ಹೆಚ್ಚು ಹುಮ್ಮಸ್ಸಿನಿಂದ ಆಡಬಹುದು ಎನ್ನುವುದು ಆತನ ಮನಸ್ಸಿನಲ್ಲಿ ಇದ್ದಂತಿದೆ.

ರಾಷ್ಟ್ರೀಯ ತಂಡದಿಂದ ಮೆಸ್ಸಿ ನಿವೃತ್ತಿಯಾಗುವುದು ಅವನಿಗೆ ಒಳ್ಳೆಯದೋ ಅಲ್ಲವೋ; ಆದರೆ ಅರ್ಜೆಂಟೀನಾ ತಂಡಕ್ಕಂತೂ ಒಳ್ಳೆಯದಾಗಬಹುದು ಎನ್ನುವ ವಾದ ಬಲವಾಗಿದೆ. ಈಗ ತಂಡ ಸಂಪೂರ್ಣವಾಗಿ ಮೆಸ್ಸಿಯ ಮೇಲೆಯೇ ಅವಲಂಬಿಸಿದ್ದು, ಮೆಸ್ಸಿಯ ಆಟಕ್ಕೆ ತಕ್ಕಂತೆ ಪೂರಕವಾಗಿ ಆಡುವ ಆಟಗಾರರನ್ನು ಆಯ್ಕೆ ಮಾಡಲಾಗುತ್ತಿದೆ. ಇದರಿಂದ ಕೆಲವು ಅತ್ಯುತ್ತಮ ಆಟಗಾರರು ತಂಡದಿಂದ ಹೊರಗೇ ಉಳಿದಿದ್ದಾರೆ. ಇನ್ನು ಕೆಲವರು ತಂಡದಲ್ಲಿದ್ದರೂ ಅವರು ಮೆಸ್ಸಿಯ ಮೇಲಿನ ಅವಲಂಬನೆಯಿಂದಾಗಿ ತಮ್ಮ ಪೂರ್ಣ ಸಾಮರ್ಥ್ಯವನ್ನು ಪ್ರದರ್ಶಿಸಲು ಆಗುತ್ತಿಲ್ಲ. ಮೆಸ್ಸಿ ನಿವೃತ್ತಿಯಾದರೆ ತಂಡದ ಸ್ವರೂಪ ಬದಲಾಗಿ ಹೊಸ ತಂಡವನ್ನು ಕಟ್ಟಲು ಅನುಕೂಲವಾಗುತ್ತದೆ. ಆಗ ಹೊಸ ತರುಣ ಆಟಗಾರರಿಗೂ ಅವಕಾಶ ಸಿಕ್ಕಂತಾಗುತ್ತದೆ. ತಂಡದಲ್ಲಿದ್ದ ಸೂಪರ್‌ಸ್ಟಾರ್ ಆಟಗಾರನೊಬ್ಬ ನಿವೃತ್ತಿಯಾದ ಬಳಿಕ ಹೊಸ ತಂಡ ಅತ್ಯುತ್ತಮ ಸಾಧನೆ ಮಾಡಿದ ಬೇರೆ ದೇಶದ ಉದಾಹರಣೆಗಳೂ ಕಣ್ಣಮುಂದಿವೆ– ಎಂಬಿತ್ಯಾಗಿ ವಾದಗಳು ಬಲವಾಗಿವೆ.

ಇದೆಲ್ಲವನ್ನು ನೋಡಿದರೆ ಮೆಸ್ಸಿ ನಿವೃತ್ತಿ ಘೋಷಿಸುವುದು ಖಚಿತ ಎನ್ನಬಹುದು. ಆದರೆ ಒಂದಂತೂ ಸತ್ಯ. ನಿವೃತ್ತಿಯ ನಿರ್ಧಾರವನ್ನು ಮೆಸ್ಸಿ ಕೈಗೊಳ್ಳಬೇಕೇ ಹೊರತು, ಅರ್ಜೆಂಟೀನಾ ತಂಡದ ಮ್ಯಾನೇಜ್‌ಮೆಂಟ್ ಅಂತೂ ಕೈಗೊಳ್ಳುವ ಸಾಧ್ಯತೆ ಇಲ್ಲ.

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65